ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 18-01-2004.

# *ವಿಶ್ವದ ಅಥಾರಿಟಿಯ ಡೈರೆಕ್ಟ್ ಮಕ್ಕಳಾಗಿದ್ದೇವೆ ಎಂಬ ಸ್ಮೃತಿಯನ್ನು ಪ್ರತ್ಯಕ್ಷ ರೂಪದಲ್ಲಿ ಇಟ್ಟುಕೊಂಡು ಸರ್ವಶಕ್ತಿಗಳನ್ನು ಆಜ್ಞೆಯ ಪ್ರಮಾಣ ನಡೆಸಿ*

(वर्ल्ड अथॉरिटी के डायरेक्ट बच्चे हैं - इस स्मृति को इमर्ज रख सर्व शक्तियों को ऑर्डर से चलाओ)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

- ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.
- ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.
- ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.
- ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ನಾಲ್ಕಾರು ಕಡೆಯ ಎಲ್ಲಾ ಮಕ್ಕಳು ಸ್ನೇಹದ ಅಲೆಗಳಲ್ಲಿ ಸಮಾವೇಶವಾಗಿದ್ದಾರೆ. ಎಲ್ಲರ ಹೃದಯದಲ್ಲಿ ವಿಶೇಷವಾಗಿ ಬ್ರಹ್ಮಾ ತಂದೆಯ ಸ್ಮೃತಿಯು ಇಮರ್ಜ್(ಪ್ರತ್ಯಕ್ಷ) ಆಗಿದೆ. ಅಮೃತವೇಳೆಯಿಂದ ಹಿಡಿದು ಸಾಕಾರ ಪಾಲನೆಯನ್ನು ಪಡೆದ ರತ್ನಗಳು ಮತ್ತು ಜೊತೆಯಲ್ಲಿ ಅಲೌಕಿಕ ಪಾಲನೆಯಲ್ಲಿರುವ ಇಬ್ಬರ ಹೃದಯದ ಸ್ಮೃತಿಯ ಮಾಲೆಗಳು  ಬಾಪ್‌ದಾದಾರವರ ಬಳಿ ತಲುಪಿದೆ. ಎಲ್ಲರ ಹೃದಯದಲ್ಲಿ ಬಾಪ್‌ದಾದಾರವರ ಸ್ಮೃತಿಯ ಚಿತ್ರವೇ ಕಾಣಿಸುತ್ತಿದೆ ಮತ್ತು ತಂದೆಯ ಹೃದಯದಲ್ಲಿ ಎಲ್ಲಾ ಮಕ್ಕಳ ಸ್ನೇಹ,  ಮಕ್ಕಳ ಸ್ನೇಹ ತುಂಬಿದ ಹೃದಯವು ಸಮಾವೇಶವಾಗಿದೆ ಎಲ್ಲರ ಹೃದಯದಿಂದ ಒಂದೇ ಸ್ನೇಹ ತುಂಬಿದ ಗೀತೆಯು ಮೊಳಗುತ್ತಿದೆ. ನನ್ನ ಬಾಬಾ ಮತ್ತು ತಂದೆಯ ಹೃದಯದಿಂದಲೂ ಇದೇ ಗೀತೆಯು ಮೊಳಗುತ್ತಿದೆ - ನನ್ನ ಮಧುರಾತಿ ಮಧುರ ಮಕ್ಕಳೇ, ತಾನಾಗಿಯೇ

ಮೊಳಗುವ ಈ ಗೀತೆಯು ಎಷ್ಟು ಪ್ರಿಯವಾಗಿದೆ! ಬಾಪ್‌ದಾದಾ ಎಲ್ಲಾ ಕಡೆಯ ಮಕ್ಕಳಿಗೆ ಸ್ನೇಹ ತುಂಬಿದ ಸ್ಥಿತಿಗೆ ಫಲವಾಗಿ ಹೃದಯದ ಸ್ನೇಹ ತುಂಬಿದ ಪದಮದಷ್ಟು ಆಶೀರ್ವಾದಗಳನ್ನು ಕೊಡುತ್ತಿದ್ದಾರೆ.

ಬಾಪ್‌ದಾದಾರವರು ನೋಡುತ್ತಿದ್ದರು ಈಗಲೂ ಸಹ ದೇಶ- ವಿದೇಶದ ಮಕ್ಕಳು ಸ್ನೇಹದ ಸಾಗರದಲ್ಲಿ ಲವಲೀನರಾಗಿದ್ದಾರೆ. ಈ ಸ್ಮೃತಿ ದಿವಸವು ವಿಶೇಷವಾಗಿ ಎಲ್ಲಾ ಮಕ್ಕಳ ಪ್ರತಿ ಸಮರ್ಥರನ್ನಾಗಿ ಮಾಡುವ ದಿವಸವಾಗಿದೆ. ಇಂದಿನ ದಿನವು ಮಕ್ಕಳಿಗೆ ಬ್ರಹ್ಮಾತಂದೆಯ ಮೂಲಕ ಕಿರೀಟ ಧಾರಣೆಯಾಗಿರುವ ದಿನವಾಗಿದೆ ಅಂದರೆ ಬ್ರಹ್ಮಾತಂದೆಯು ನಿಮಿತ್ತ ಮಕ್ಕಳಿಗೆ ವಿಶ್ವಸೇವೆಯ ಜವಾಬ್ದಾರಿಯ ಕಿರೀಟವನ್ನು ಇಟ್ಟರು. ಸ್ವಯಂ ಗುಪ್ತವಾಗಿ ಮಕ್ಕಳನ್ನು ಸಾಕಾರ ಸ್ವರೂಪದಲ್ಲಿ ನಿಮಿತ್ತರನ್ನಾಗಿ ಮಾಡಿ. ಸ್ಮೃತಿಯ ತಿಲಕವನ್ನು ಕೊಟ್ಟರು. ಸ್ವಯಂ ಸಮಾನ ಅವ್ಯಕ್ತ ಫರಿಶ್ತಾ ಸ್ವರೂಪದ, ಪ್ರಕಾಶದ ಕಿರೀಟವನ್ನು ತೊಡಿಸಿದರು. ತಾವು ಮಾಡಿಸುವವರಾಗಿ ಮಕ್ಕಳನ್ನು ಮಾಡಲು ಬಿಟ್ಟರು. ಆದ್ದರಿಂದ ಈ ದಿವಸವನ್ನು ಸ್ಮೃತಿ ದಿವಸ ಮತ್ತು ಸಮರ್ಥ ದಿವಸ ಎಂದು ಹೇಳಲಾಗುತ್ತದೆ. ಕೇವಲ ಸ್ಮೃತಿ ಅಲ್ಲ, ಸ್ಮೃತಿಯ ಜೊತೆ-ಜೊತೆಗೆ ಸರ್ವಸ್ಮೃತಿಗಳೂ ಮಕ್ಕಳಿಗೆ ವರದಾನದ ರೂಪದಲ್ಲಿ ಪ್ರಾಪ್ತಿಯಾಗಿವೆ. ಬಾಪ್‌ದಾದಾ ಎಲ್ಲಾ ಮಕ್ಕಳನ್ನು ಸರ್ವಸ್ಮೃತಿಗಳ ಸ್ವರೂಪದ ರೂಪದಲ್ಲಿ ನೋಡುತ್ತಿದ್ದರು. ಮಾಸ್ಟರ್ ಸರ್ವಶಕ್ತಿವಂತರ ರೂಪದಲ್ಲಿ ನೋಡುತ್ತಿದ್ದರು. ಕೇವಲ ಶಕ್ತಿವಂತರಲ್ಲ, ಸರ್ವಶಕ್ತಿವಂತರು. ಈ ಶಕ್ತಿಗಳು ತಂದೆಯ ಮೂಲಕ ಪ್ರತಿಯೊಂದು ಮಗುವಿಗೂ ವರದಾನದ ರೂಪದಲ್ಲಿ ಪ್ರಾಪ್ತಿಯಾಗಿವೆ. ದಿವ್ಯಜನ್ಮವನ್ನು ಪಡೆಯುತ್ತಿದ್ದಂತೆಯೇ ಬಾಪ್‌ದಾದಾ ವರದಾನವನ್ನು ಕೊಟ್ಟರು - ಸರ್ವಶಕ್ತಿವಾನ್ ಭವ! ಇದು ಪ್ರತಿಯೊಬ್ಬರ ಜನ್ಮ ದಿವಸದ ವರದಾನವಾಗಿದೆ. ಈ ಶಕ್ತಿಗಳನ್ನು ವರದಾನದ ರೂಪದಲ್ಲಿ ಕಾರ್ಯದಲ್ಲಿ ತೊಡಗಿಸಿರಿ. ಪ್ರತಿಯೊಬ್ಬ ಮಗುವಿಗೂ ಈ ವರದಾನ ಸಿಕ್ಕಿದೆ ಆದರೆ ಅದನ್ನು ಕಾರ್ಯದಲ್ಲಿ ತೊಡಗಿಸುವುದರಲ್ಲಿ ನಂಬರ್‌ವಾರ್ ಆಗಿಬಿಡುತ್ತಾರೆ. ಪ್ರತಿಯೊಂದು ಶಕ್ತಿಯ ವರದಾನಕ್ಕೂ ನೀವು ಸಮಯಾನುಸಾರ ಅದೇಶ ಮಾಡಬಹುದು, ಒಂದುವೇಳೆ ವರದಾತನ ವರದಾನದ ಸ್ಮೃತಿಸ್ವರೂಪರಾಗಿ ಸಮಯದನುಸಾರ ಯಾವುದಾದರೂ ಶಕ್ತಿಗೆ ಆಜ್ಞೆ(ಆದೇಶ) ಮಾಡಿದಾಗ ಪ್ರತೀ ಶಕ್ತಿಯು ಅಲ್ಲಿ ಹಾಜರಾಗಲೇಬೇಕು. ವರದಾನದ ಪ್ರಾಪ್ತಿಯ ಮಾಲೀಕರಾಗಿ ಸ್ಮೃತಿ ಸ್ವರೂಪದಲ್ಲಿದ್ದು ತಾವು ಆಜ್ಞೆ ಮಾಡಿ ಆಗ ಆ ಶಕ್ತಿಯು ಸಮಯಕ್ಕೆ ಕಾರ್ಯದಲ್ಲಿ ಬರದೇ ಇರಲು ಸಾಧ್ಯವಿಲ್ಲ. ಆದರೆ ಮಾಲೀಕ ಹಾಗೂ ಮಾಸ್ಟರ್ ಸರ್ವಶಕ್ತಿವಂತನ ಸ್ಮೃತಿಯ ಆಸನದಲ್ಲಿ ಸ್ಥಿತರಾಗಿ ಆಜ್ಞೆ ಮಾಡಿ. ಆ ಆಸನದಲ್ಲಿ ಸ್ಥಿತರಾಗದೆ ಮಾಡಿದರೆ ಅದನ್ನು ಅಜ್ಞೆ ಎಂದು ಹೇಳಲಾಗುವುದಿಲ್ಲ. ಬಾಬಾ ನಾವು ತಮ್ಮನ್ನು ನೆನಪು ಮಾಡುತ್ತೇವೆ ಎಂದು ಯಾವಾಗ ಮಕ್ಕಳು ಹೇಳುತ್ತೀರೋ ಆಗ ತಂದೆಯು ಹಾಜರಾಗಿಬಿಡುತ್ತಾರೆ. ಯಾವಾಗ ತಂದೆಯೇ ಅಲ್ಲಿ ಹಾಜರಾಗುತ್ತಾರೆಂದಮೇಲೆ ಶಕ್ತಿಗಳು ಏಕೆ ಹಾಜರಾಗುವುದಿಲ್ಲ! ಇದಕ್ಕೋಸ್ಕರ ಕೇವಲ ವಿಧಿಪೂರ್ವಕ ಮಾಲೀಕತನದ ಅಧಿಕಾರದಿಂದ ಆರ್ಡರ್ ಮಾಡಿ ಈ ಸರ್ವಶಕ್ತಿಗಳು ವಿಶೇಷವಾಗಿ ಸಂಗಮಯುಗದ ಪರಮಾತ್ಮನ ಅಸ್ತಿಯಾಗಿದೆ(ವಾರಸತ್ವ). ವಾರಸತ್ವವು ಸದಾ ಯಾರಿಗೋಸ್ಕರ ಇರುತ್ತದೆ? ಮಕ್ಕಳಿಗಾಗಿಯೇ ಆಸ್ತಿಯಿರುತ್ತದೆ ಅಂದಾಗ ಅಧಿಕಾರದಿಂದ ಸ್ಮೃತಿ ಸ್ವರೂಪದ ಅಸನದ ಮೇಲೆ ಸ್ಥಿತವಾಗಿದ್ದು ಆರ್ಡರ್ ಮಾಡಿ. ಏಕೆ ಶ್ರಮ ಪಡುತ್ತಿದ್ದೀರಿ" ಕೇವಲ ಆರ್ಡರ್(ಆದೇಶ) ಮಾಡಿ ಏಕೆಂದರೆ ತಾವು ವಿಶ್ವದ ಅಥಾರಿಟಿಯ ಡೈರೆಕ್ಟ್ ಮಕ್ಕಳಾಗಿದ್ದೀರಿ - ಈ ಸ್ಮೃತಿಯ ನಶೆಯು ಸದಾ ಪ್ರತ್ಯಕ್ಷವಾಗಿರಲಿ.

ತಮ್ಮನ್ನು ತಾವು ಪರಿಶೀಲನೆ ಮಾಡಿಕೊಳ್ಳಿರಿ- ನಾನು ವಿಶ್ವದ ಅಲ್‌ಮೈಟಿ ಅಥಾರಿಟಿಯ ಅಧಿಕಾರಿ ಅತ್ಮನಾಗಿದ್ದೇನೆ ಎಂಬ ಸ್ಮೃತಿಯು ಸಹಜವಾಗಿ ಇರುತ್ತದೆಯೇ? ಇರುತ್ತದೆಯೇ ಅಥವಾ ಒಮ್ಮೊಮ್ಮೆ ಮಾತ್ರ ಇರುತ್ತದೆಯೇ? ಇತ್ತೀಚಿನ ಸಮಯದಲ್ಲಂತೂ ಅಧಿಕಾರವನ್ನು ಪಡೆಯುವುದಕ್ಕೋಸ್ಕರವೇ ಜಗಳ- ಕಲಹಗಳು ಆಗುತ್ತಿವೆ ಆದರೆ ತಮ್ಮೆಲ್ಲರಿಗೆ ಪರಮಾತ್ಮನ ಅಧಿಕಾರ. ಪರಮಾತ್ಮನ ಆಥಾರಿಟಿಯು ಜನ್ಮದಿಂದಲೇ ಪ್ರಾಪ್ತವಾಗಿದೆ. ಅಂದಾಗ ತಮ್ಮ ಅಧಿಕಾರದ ಸಮರ್ಥ ಸ್ವರೂಪದಲ್ಲಿ ಇರಿ. **ತಾವೂ ಸಮರ್ಥರಾಗಿರಿ ಮತ್ತು ಸರ್ವಾತ್ಮರಿಗೂ ಸಮರ್ಥತೆಯನ್ನು ಕೂಡಿಸಿ ಸರ್ವಾಆತ್ಮರು ಈ ಸಮಯದಲ್ಲಿ ಸಮರ್ಥ ಅರ್ಥಾತ್ ಶಕ್ತಿಗಳ ಭಿಕಾರಿಗಳಾಗಿದ್ದಾರೆ. ತಮ್ಮ ಜಡಚಿತ್ರಗಳ ಮುಂದೆ ಹೋಗಿ ಬೇಡುತ್ತಿರುತ್ತಾರೆ. ಆದ್ದರಿಂದ ತಂದೆಯು ತಿಳಿಸುತ್ತಾರೆ - ಹೇ! ಸಮರ್ಥ ಅತ್ಮರೇ ಸರ್ವಾತ್ಮರಿಗೂ ಶಕ್ತಿಯನ್ನು ಕೊಡಿ. ಸಾಮರ್ಥ್ಯವನ್ನು ಕೊಡಿ. ಇದಕ್ಕೋಸ್ಕರ ಪ್ರತಿಯೊಬ್ಬ ಮಗು ಕೇವಲ ಒಂದು ಮಾತಿನ ಮೇಲೆ ಗಮನವಿಡುವ ಅವಶ್ಯಕತೆ ಇದೆ - ಬಾಪ್‌ದಾದಾರವರು ಈ ಸೂಚನೆಯನ್ನು ಕೊಟ್ಟಿದ್ದರು ಮತ್ತು ಫಲಿತಾಂಶದಲ್ಲಿ ನೋಡಿದರು ಬಹಳಷ್ಟು ಮಕ್ಕಳ ಸಂಕಲ್ಪ ಮತ್ತು ಸಮಯ ವ್ಯರ್ಥವಾಗಿ ಹೋಗುತ್ತಿದೆ. ಹೇಗೆ ವಿದ್ಯುತ್ತಿನ ಕರೆಕ್ಷನ್ ಒಂದುವೇಳೆ ಸ್ವಲ್ಪ ಸಡಿಲವಾದರೂ ಸಹ ಅಲ್ಲಿ ಲೈಟ್ ಸರಿಯಾಗಿ ಬರುವುದಿಲ್ಲ. ಹಾಗೆಯೇ ಈ ವ್ಯರ್ಥದ ಲೀಕೇಜ್ (ಸೋರುವಿಕೆ) ಸಮರ್ಥ ಸ್ಥಿತಿಯನ್ನು ಸದಾಕಾಲದ ಸ್ಮೃತಿಯನ್ನಾಗಿ ಮಾಡಿಕೊಳ್ಳಲು ಬಿಡುವುದಿಲ್ಲ. ಆದ್ದರಿಂದ ವ್ಯರ್ಥವನ್ನು ಉಳಿತಾಯದಲ್ಲಿ ಪರಿವರ್ತನೆ ಮಾಡಿಕೊಳ್ಳಿರಿ. ಉಳಿತಾಯದ ಯೋಜನೆ ಮಾಡಿ ಮತ್ತು ಅದರಿಂದ ಪರ್ಸೆಂಟೇಜ್ ತೆಗೆಯಿರಿ ಇಡೀ ದಿನದಲ್ಲಿ ಎಷ್ಟು ವ್ಯರ್ಥವಾಯಿತು ಮತ್ತು ಎಷ್ಟು ಉಳಿತಾಯವಾಯಿತು? ಒಂದುವೇಳೆ 40% ವ್ಯರ್ಥವಾಗುತ್ತಿದೆ ಅಥವಾ 20% ವ್ಯರ್ಥವಾಗಿ ಹೋಗುತ್ತಿದೆ ಎಂದು ತಿಳಿಯಿರಿ ಅದನ್ನು ಉಳಿತಾಯ ಮಾಡಿ. ಸ್ವಲ್ಪವೇ ವ್ಯರ್ಥವಾಗಿ ಹೋಗುತ್ತಿದೆ, ಉಳಿದಂತೆ ಇಡೀ ದಿನ ಸರಿಯಾಗಿರುತ್ತದೆ ಎಂದು ತಿಳಿಯುವುದಲ್ಲ ಆದರೆ ಈ ವ್ಯರ್ಥದ ಅಭ್ಯಾಸವು ಬಹಳ ಸಮಯದ ಅಭ್ಯಾಸವಾಗಿರುವ ಕಾರಣ ಇದೇ ಅಂತಿಮ ಘಳಿಗೆಯಲ್ಲಿ ಮೋಸಗೊಳಿಸಬಹುದು. ನಂಬರ್‌ವಾರಾಗಿ ಮಾಡಿ ಬಿಡುತ್ತದೆ. ನಂಬರ್‌ವನ್ ಆಗಲು ಬಿಡುವುದಿಲ್ಲ.** ಹೇಗೆ ಪ್ರತಿನಿತ್ಯ ರಾತ್ರಿಯಲ್ಲಿ ಬ್ರಹ್ಮಾ ತಂದೆಯು ಆದಿಯಲ್ಲಿ ತಮ್ಮ ಚೆಕಿಂಗ್‌ನ ಕಾರಣ ಪ್ರತಿನಿತ್ಯ ದರ್ಬಾರನ್ನು ನಡೆಸುತ್ತಿದ್ದರು. ಯಾವ ದರ್ಬಾರ್? ಮಕ್ಕಳ ದರ್ಬಾರಲ್ಲ. ತಮ್ಮದೇ ಕರ್ಮೇಂದ್ರಿಯಗಳ ದರ್ಬಾರನ್ನು ನಡೆಸುತ್ತಿದ್ದರು ಮತ್ತು ಆಜ್ಞೆ ಮಾಡುತ್ತಿದ್ದರು ಹೇ! ಮುಖ್ಯಮಂತ್ರಿಯಾದ ಮನಸ್ಸೇ ಈ ನಿನ್ನ ಚಲನೆಯು ಸರಿಯಾಗಿಲ್ಲ. ಆಜ್ಞೆಯಂತೇ ನಡೆ. ಈ! ಸಂಸ್ಕಾರವೇ ಆಜ್ಞೆಯಂತೆ ನಡೆ. ಏಕೆ ಮೇಲೆ-ಕೆಳಗೆ ಆಯಿತು. ಕಾರಣವನ್ನು ತಿಳಿಸಿ, ನಿವಾರಣೆ ಮಾಡಿಕೊಳ್ಳಿ. ಹೀಗೆ ಪ್ರತಿನಿತ್ಯ ಅಫಿಶಿಯಲ್ ದರ್ಬಾರನ್ನು ನಡೆಸುತ್ತಿದ್ದರು. ಹಾಗೆಯೇ ತಾವು ಸಹ ತಮ್ಮ ಸ್ವರಾಜ್ಯದ ದರ್ಬಾರನ್ನು ನಡೆಸಿ. ಕೆಲವು ಮಕ್ಕಳು ಬಾಪ್‌ದಾದಾರವರೊಂದಿಗೆ ಮಧುರಾತಿ ಮಧುರ ವಾರ್ತಾಲಾಪವನ್ನು ಮಾಡುತ್ತಾರೆ ವೈಯಕ್ತಿಕ ವಾರ್ತಾಲಾಪವನ್ನು ಮಾಡುತ್ತಾರೆ. ತಿಳಿಸುವುದೇ. ಕೆಲವರು ವೈಯಕ್ತಿಕ ವಾರ್ತಾಲಾಪ ಮಾಡುತ್ತಾ ಕೇಳುತ್ತಾರೆ. ಬಾಬಾ ನಾವು ಭವಿಷ್ಯದಲ್ಲಿ ಏನಾಗುತ್ತೇವೆ ಎಂದು ನಮ್ಮ ಭವಿಷ್ಯದ ಚಿತ್ರವನ್ನು ತೋರಿಸಿ. ಆದಿರತ್ನಗಳಿಗೆ ನೆನಪು ಇರಬೇಕಲ್ಲವೇ ಜಗದಾಂಬಾ ತಾಯಿಯೊಂದಿಗೂ ಸಹ ಎಲ್ಲಾ ಮಕ್ಕಳು ತಮ್ಮ ಚಿತ್ರವನ್ನು ಕೇಳುತ್ತಿದ್ದರು - ಮಮ್ಮಾ ನಾವು ಭವಿಷ್ಯದಲ್ಲಿ ಹೇಗಿರುತ್ತೇವೆ ಎಂದು ನೀವು ನಮಗೆ ಚಿತ್ರವನ್ನು ತೋರಿಸಿ. ಹಾಗೆಯೇ ಬಾಪ್‌ದಾದಾರವರೊಂದಿಗೆ ವಾರ್ತಾಲಾಪ ಮಾಡುತ್ತಾ ತಮ್ಮ ಚಿತ್ರವನ್ನು ಕೇಳುತ್ತಾರೆ. ನಮಗೂ ಚಿತ್ರವು ಸಿಕ್ಕಿದರೆ ಒಳ್ಳೆಯದೆಂಬ ಬಯಕೆಯು ತಮ್ಮೆಲ್ಲರಿಗೂ ಇರಬಹುದು ಆದರೆ ಬಾಪ್‌ದಾದಾ ತಿಳಿಸುತ್ತಾರೆ - ಬಾಪ್‌ದಾದಾ

ಪ್ರತಿಯೊಬ್ಬ ಮಗುವಿಗೂ ಒಂದು ವಿಚಿತ್ರ ದರ್ಪಣವನ್ನು ಕೊಟ್ಟಿದ್ದಾರೆ. ಆ ದರ್ಪಣ ಯಾವುದು? ವರ್ತಮಾನ ಸಮಯದಲ್ಲಿ ತಾವು ಸ್ವರಾಜ್ಯಾಧಿಕಾರಿಗಳಾಗಿದ್ದೀರಲ್ಲವೇ! ಆಗಿದ್ದೀರಾ? ಸ್ವರಾಜ್ಯಾಧಿಕಾರಿಗಳಾಗಿದ್ದೀರಾ? ಆಗಿದ್ದರೆ ಕೈಯನ್ನು ಎತ್ತಿರಿ. ಸ್ವರಾಜ್ಯ, ಅಧಿಕಾರಿಗಳಾಗಿದ್ದೀರಾ? ಒಳ್ಳೆಯದು. ಕೆಲ-ಕೆಲವರು ಕೈ ಎತ್ತುತ್ತಿಲ್ಲ, ಸ್ವಲ್ಪ- ಸ್ವಲ್ಪ ಆಗಿದ್ದೀರಾ? ಒಳ್ಳೆಯದು. ಸ್ವರಾಜ್ಯಾಧಿಕಾರಿಗಳಾಗಿದ್ದೀರಿ, ಶುಭಾಶಯಗಳು. ಅಂದಾಗ ಸ್ವರಾಜ್ಯಾಧಿಕಾರದ ಚಾರ್ಟ್ ತಮಗೋಸ್ಕರ ಭವಿಷ್ಯ ಪದವಿಯ ಚೆಹರೆಯನ್ನು ತೋರಿಸುವ ದರ್ಪಣವಾಗಿದೆ. ಈ ದರ್ಪಣವಿದೆಯೇ? ಎಲ್ಲರಿಗೂ ಸಿಕ್ಕಿದೆಯಲ್ಲವೇ? ಸ್ಪಷ್ಟವಾಗಿದೆಯಲ್ಲವೇ? ಯಾವುದೇ ಇಂತಹ ಕಪ್ಪು ಕಲೆಯಂತೂ ಬಿದ್ದಿಲ್ಲ ತಾನೇ ಒಳ್ಳೆಯದು. ಕಪ್ಪು ಕಲೆಯಂತೂ ಇರುವುದಿಲ್ಲ ಆದರೆ ಕೆಲ-ಕೆಲವೊಮ್ಮೆ ಕನ್ನಡಿಯ ಮೇಲೆ ಬಿಸಿನೀರಿನ ಆವಿಯ ತರಹ ಬಂದುಬಿಡುತ್ತದೆ. ಹೇಗೆ ಹಿಮವಿದ್ದಾಗ ಕನ್ನಡಿಯ ಮೇಲೆ ಈ ರೀತಿ ಆಗಿಬಿಡುತ್ತದೆ – ಅದರಲ್ಲಿ ಸ್ಪಷ್ಟವಾಗಿ ಕಾಣಿಸುವುದಿಲ್ಲ. ಸ್ನಾನದ ಸಮಯದಲ್ಲಂತೂ ಎಲ್ಲರಿಗೂ ಅನುಭವವಿರಬೇಕು ಅಂದಾಗ ಹೀಗೆಯೇ ಒಂದುವೇಳೆ ಯಾವ ಒಂದು ಕರ್ಮೇಂದ್ರಿಯವೂ ಇಲ್ಲಿಯವರೆಗೂ ತಮ್ಮ ಪೂರ್ಣ ನಿಯಂತ್ರಣದಲ್ಲಿಲ್ಲವೋ, ನಿಯಂತ್ರಣದಲ್ಲಿ ಇದೆ ಆದರೆ ಒಮ್ಮೊಮ್ಮೆ ಇರುವುದಿಲ್ಲ ಎಂದಿಟ್ಟುಕೊಳ್ಳಿ. ಒಂದುವೇಳೆ ಯಾವುದೇ ಕರ್ಮೇಂದ್ರಿಯ, ಕಣ್ಣುಗಳಿರಬಹುದು, ಬಾಯಿ ಇರಬಹುದು. ಕಿವಿ, ಕಾಲುಗಳೂ ಸಹ ಕೆಟ್ಟ ಸಂಗದ ಕಡೆ ಕೆಲವೊಮ್ಮೆ ಹೊರಟುಹೋಗುತ್ತದೆ ಅಂದಮೇಲೆ ಕಾಲುಗಳೂ ಸಹ ನಿಯಂತ್ರಣದಲ್ಲಿ ಇಲ್ಲವೆಂದಾಯಿತಲ್ಲವೇ. ಸಂಘಟನೆಯಲ್ಲಿ ಕುಳಿತುಬಿಡುತ್ತೀರಿ ಉಲ್ಟಾ ರಾಮಾಯಣ ಮತ್ತು ಭಾಗವತದ ಕಥೆಗಳನ್ನು ಕೇಳುತ್ತೀರಿ. ನಿಜವಾದವೂ ಅಲ್ಲ. ಅಂದಾಗ ಯಾವುದೇ ಕರ್ಮೇಂದ್ರಿಯ ಸಂಕಲ್ಪ, ಸಮಯ ಸಹಿತವಾಗಿ ಒಂದುವೇಳೆ ನಿಯಂತ್ರಣದಲ್ಲಿ ಇಲ್ಲವೆಂದರೆ ಇದರಿಂದಲೇ ಪರಿಶೀಲನೆ ಮಾಡಿಕೊಳ್ಳಿರಿ. ಯಾವಾಗ ಸ್ವರಾಜ್ಯದಲ್ಲಿಯೇ ನಿಯಂತ್ರಣಾ ಶಕ್ತಿ ಇಲ್ಲವೆಂದರೆ ವಿಶ್ವರಾಜ್ಯವನ್ನು ಹೇಗೆ ನಿಯಂತ್ರಣ ಮಾಡುತ್ತೀರಿ! ಅಂದಾಗ ಹೇಗೆ ರಾಜರಾಗುತ್ತೀರಿ? ಅಲ್ಲಂತೂ ಎಲ್ಲವೂ ಅಕ್ಯೂರೇಟಾಗಿ(ವಿಧಿಪೂರ್ವಕವಾಗಿ) ಇರುತ್ತವೆ. ಕಂಟ್ರೋಲಿಂಗ್ ಪವರ್, ರೂಲಿಂಗ್ ಪವರ್ ಎಲ್ಲವೂ ಸ್ವತಃವಾಗಿಯೇ ಸಂಗಮಯುಗದ ಪುರುಷಾರ್ಥದ ಪ್ರಾಲಬ್ಧದ ರೂಪದಲ್ಲಿಯೇ ನಡೆಯುತ್ತವೆ. ಅಂದಾಗ ಸಂಗಮಯುಗ ಅರ್ಥಾತ್ ವರ್ತಮಾನ ಸಮಯದಲ್ಲಿ ಒಂದುವೇಳೆ ನಿಯಂತ್ರಣಾ ಶಕ್ತಿ ಅಥವಾ ಆಡಳಿತದ ಶಕ್ತಿ ಕಡಿಮೆ ಇದೆ ಎಂದರೆ ಎಂದರೆ, ಪುರುಷಾಥವೇ ಕಡಿಮೆ ಅಂದಾಗ ಯಾವ ಪ್ರಾಲಬ್ಧವು ಸಿಗುವುದು? ಲೆಕ್ಕ ಮಾಡುವುದರಲ್ಲಂತೂ ಬುದ್ಧಿವಂತರಾಗಿದ್ದೀರಲ್ಲವೇ ಆದ್ದರಿಂದ ಈ ದರ್ಪಣದಲ್ಲಿ ತಮ್ಮ ಮುಖವನ್ನು ನೋಡಿಕೊಳ್ಳಿರಿ. ತಮ್ಮ ಹಾವ-ಭಾವವನ್ನು ನೋಡಿಕೊಳ್ಳಿ. ನನ್ನ ಮುಖವು ರಾಜನದಾಗಿದೆಯೇ. ರಾಯಲ್ ಪರಿವಾರದವರದಾಗಿದೆಯೇ. ರಾಯಲ್ ಪ್ರಜೆಗಳದಾಗಿದೆಯೇ, ಸಾಧಾರಣ ಪ್ರಜೆಗಳಲ್ಲಿ ಬರುವಂತವರದಾಗಿದೆಯೇ, ಯಾವ ಮುಖವಾಗಿದೆ? ಚಿತ್ರವು ಸಿಕ್ಕಿತೇ? ಈ ಚಿತ್ರದಿಂದ ಪರಿಶೀಲನೆ ಮಾಡಿಕೊಳ್ಳಿರಿ. ಪ್ರತಿನಿತ್ಯವೂ ಪರಿಶೀಲನೆ ಮಾಡಿಕೊಳ್ಳಿರಿ ಏಕೆಂದರೆ ಬಹಳ ಕಾಲದ ಪುರುಷಾರ್ಥವು, ಬಹಳಕಾಲದ ರಾಜ್ಯಭಾಗ್ಯವನ್ನು ಪ್ರಾಪ್ತಿ ಮಾಡಿಸುತ್ತದೆ. ಒಂದುವೇಳೆ ತಾವು ಯೋಚನೆ ಮಾಡಿ ಅಂತಿಮ ಸಮಯದಲ್ಲಿ ಬೇಹದ್ದಿನ ವೈರಾಗ್ಯಾವಂತೂ ಬಂದೇ ಬರುತ್ತದೆ ಆದರೆ ಅಂತ್ಯದ ಸಮಯದಲ್ಲಿ ಬಂದರೆ ಅದು ಬಹಳಕಾಲದ ವೈರಾಗ್ಯವಾಯಿತೋ ಅಥವಾ ಸ್ವಲ್ಪ ಕಾಲದ್ದಾಯಿತೇ? ಬಹಳ ಕಾಲದ್ದೆಂದು ಹೇಳುವುದಿಲ್ಲವಲ್ಲವೇ! ಅಂದಮೇಲೆ ಪೂರ್ಣ 21 ಜನ್ಮಗಳ ರಾಜ್ಯಾಧಿಕಾರಿ ಆಗುತ್ತೀರಾ? ಭಲೆ ಸಿಂಹಾಸನದ ಮೇಲಂತೂ ಕುಳಿತುಕೊಂಡಿಲ್ಲ ಆದರೆ ರಾಜ್ಯಾಧಿಕಾರಿಗಳಾಗಿದ್ದೀರಿ. ಇದು ಬಹಳ ಕಾಲದ ಪ್ರಾಲಬ್ಧದ ಸಂಬಂಧವಾಗಿದೆ. ಆದ್ದರಿಂದಲೇ ಹುಡುಗಾಟಿಕೆಯಲ್ಲಿ(ಸೋಮಾರಿತನ) ಬರಬೇಡಿ. ಅರ್ಥಾತ್ ಆಲಸ್ಯದಲ್ಲಿ ಬರಬೇಡಿ. ಈಗಂತೂ ವಿನಾಶದ ದಿನಾಂಕ

ನಿಗಧಿಯಾಗಿಲ್ಲ. ಗೊತ್ತೇ ಇಲ್ಲ. ಇನ್ನೂ 1 ವರ್ಷವಾದರೂ ಇರಬಹುದು. 10 ವರ್ಷವಾದರೂ ಇರಬಹುದು, ಯಾವಾಗ ಆಗುತ್ತದೆ ಎಂದು ಗೊತ್ತಿಲ್ಲ. ಅಂದಾಗ ಬರುವ ಸಮಯದಲ್ಲಿ ಆಗಿಬಿಡುತ್ತದೆ ಎಂದಲ್ಲ. ವಿಶ್ವದ ಅಂತ್ಯಕಾಲವನ್ನು ಯೋಚಿಸುವ ಮುಂಚೆ ತನ್ನ ಜನ್ಮದ ಅಂತಿಮಕಾಲವನ್ನು ಯೋಚಿಸಿ. ತಮ್ಮ ಬಳ ದಿನಾಂಕವು ನಿಗಧಿಯಾಗಿತೆಯೇ ಅಥವಾ ಈ ದಿನಾಂಕದಂದು ನನ್ನ ಮೃತ್ಯು ಆಗಲಿದೆ ಎಂದು 'ಯಾರ ಬಳಿಯಾದರೂ ದಿನಾಂಕವಿದೆಯೇ? ಯಾರ ಬಳಿಯಾದರೂ ಇದೆಯೇ? ಇಲ್ಲ ತಾನೇ! ವಿಶ್ವದ ಅಂತ್ಯವಂತೂ ಆಗಲೇಬೇಕಾಗಿದೆ. ಸಮಯಕ್ಕೆ ಆಗಿಯೇ ಆಗುತ್ತದೆ. ಆದರೆ ಅದಕ್ಕೆ ಮುಂಚೆ ತಮ್ಮ ಅಂತ್ಯಕಾಲವನ್ನು ಯೋಚಿಸಿ ಮತ್ತು ಜಗದಂಬಾರವರ ಸ್ಲೋಗನನ್ನು ನೆನಪು ಮಾಡಿಕೊಳ್ಳಿರಿ. ಅದು ಯಾವ ಘೋಷಣೆಯಾಗಿತ್ತು "ಪ್ರತಿಘಳಿಗೆ ನನ್ನ ಅಂತಿಮ ಘಳಿಗೆ" ಎಂದು ತಿಳಿಯಿರಿ ಆಕಸ್ಮಿಕವಾಗಿ ಆಗುತ್ತದೆ. ದಿನಾಂಕವನ್ನಂತೂ ತಿಳಿಸಲಾಗುವುದಿಲ್ಲ. ವಿಶ್ವದ್ದಾಗಲಿ, ತಮ್ಮ ಅಂತಿಮ ಘಳಿಗೆಯದ್ದಾಗಲಿ, ಸಮಯವನ್ನು ತಿಳಿಸಲಾಗುವುದಿಲ್ಲ. ಎಲ್ಲವೂ ಆಕಸ್ಮಿಕವಾದ ಆಟವಾಗಿದೆ. ಆದ್ದರಿಂದ ದರ್ಬಾರನ್ನು ನಡೆಸಿ, ಹೇ ರಾಜರೇ, ಸ್ವರಾಜ್ಯಾಧಿಕಾರಿ ರಾಜರೇ, ತಮ್ಮ ದರ್ಬಾರನ್ನು ನಡೆಸಿ. ಆಜ್ಞೆಯಂತೆಯೇ ನಡೆಸಿ ಏಕೆಂದರೆ ಭವಿಷ್ಯದ ಗಾಯನವಿದೆ(ಮಹಿಮೆ) - ಅಲ್ಲಿಯ ರಾಜ್ಯ ನಿಯಮಬದ್ಧವಾಗಿ ಹಾಗೂ ಕಾನೂನುಬದ್ಧವಾಗಿರುತ್ತದೆ. ಸ್ವತಹವಾಗಿಯೇ ಆಗುತ್ತದೆ. ಪ್ರೀತಿ ಮತ್ತು ಕಾನೂನು (ಲವ್ ಅಂತ್ ಲಾ). ಎರಡರ ಬ್ಯಾಲೆನ್ಸ್ ಇರುತ್ತದೆ. ಸ್ವಾಭಾವಿಕ ವಾಗಿರುತ್ತದೆ. ರಾಜರು ಇದು ಕಾನೂನು ಎಂದು ಹೇಳುವುದಿಲ್ಲ ಹೇಗೆ ಇಂದಿನ ಕಾಲದಲ್ಲಿ ಕಾನೂನುಗಳನ್ನು ಮಾಡುತ್ತಿರುತ್ತಾರೆ. ಇಂದಿನ ಪೋಲೀಸರೂ ಸಹ ಕಾನೂನನ್ನು ತೆಗೆದುಕೊಳ್ಳುತ್ತಾರೆ. ಆದರೆ ಸತ್ಯಯುಗದಲ್ಲಿ ಸ್ವಾಭಾವಿಕವಾಗಿ ಪ್ರೀತಿ ಮತ್ತು ಕಾನೂನಿನ (ಲವ್ ನೇತ್ ಲಾ) ಸಮತೋಲನೆ ಇರುತ್ತದೆ.

ಅಂದಾಗ ಈಗ ಸರ್ವಶಕ್ತಿವಾನ್ ಸೀಟ್ನ ಮೇಲೆ (ಆಲ್ಮೈಟಿ ಅಥಾರಿಟಿಯ ಆಸನ) ಸ್ಥಿತರಾಗಿ. ಆಗ ಈ ಕರ್ಮೇಂದ್ರಿಯಗಳು. ಶಕ್ತಿಗಳು, ಗುಣಗಳು ಎಲ್ಲವೂ ತಮ್ಮ ಮುಂದೆ ಹಾಜರಾಗಿ ಹಾಜಿ ಎಂದು ಹೇಳುತ್ತವೆ. ಮೋಸಗೊಳಿಸುವುದಿಲ್ಲ. ನೀವು ಆಜ್ಞೆ ಮಾಡಿದ ತಕ್ಷಣ ಅಲ್ಲಿ ಹಾಜರಿರುತ್ತವೆ ಹಾಗಾದರೆ ಈಗ ಏನು ಮಾಡುತ್ತೀರಿ? ಬರುವ ಸ್ಮೃತಿದಿವಸದಂದು ಯಾವ ಸಮಾರೋಹವನ್ನು ಆಚರಿಸುತ್ತೀರಿ? ಪ್ರತಿಯೊಂದು ಜೋನಿವರು ಈ ಸಮಾರೋಹವನ್ನಂತೂ ಆಚರಿಸುತ್ತೀರಲ್ಲವೇ? ಸನ್ಮಾನ ಸಮಾರೋಹ ಸಮಾರಂಭವನ್ನು ಬಹಳ ಆಚರಿಸಿದ್ದೀರಿ ಆದರೆ ಈಗ ಸದಾ ಪ್ರತಿ ಸಂಕಲ್ಪ, ಸಮಯ ಮತ್ತು ಸಫಲತೆಯ ಸಮಾರೋಹವನ್ನು ಆಚರಿಸಿ. ಇಂತಹ ಸಮಾರೋಹ ಸಮಾರಂಭವನ್ನು ಆಚರಿಸಿ. ವ್ಯರ್ಥವು ಸಮಾಪ್ತಿ ಆಗಲಿ ಏಕೆಂದರೆ ತಾವು ಸಫಲತಾಮೂರ್ತಿಗಳಾಗುವುದರಿಂದ ಇತರ ಆತ್ಮರಿಗೆ ತೃಪ್ತಿಯ ಸಫಲತೆಯು ಪ್ರಾಪ್ತಿಯಾಗುವುದು. ನಾಲ್ಕಾರೂ ಕಡೆ ನಿರಾಸೆಯಿಂದ ಶುಭ ಆಸೆಗಳ ದೀಪಗಳು ಬೆಳಗುತ್ತವೆ. ಯಾವುದೇ ಸಫಲತೆ ಆಗುತ್ತದೆ ಎಂದರೆ ದೀಪಗಳನ್ನು ಬೆಳಗಿಸುತ್ತಾರಲ್ಲವೇ. ಈಗ ವಿಶ್ವದಲ್ಲಿ ಆಶಾದೀಪವನ್ನು ಬೆಳಗಿಸಿ. ಪ್ರತಿಯೊಂದು ಅತ್ಮನಲ್ಲಿಯೂ ಯಾವುದಾದರೊಂದು ನಿರಾಸೆಯು ಇದ್ದೇ ಇದೆ. ನಿರಾಸೆಗಳ ಕಾರಣವೇ ಆತಂಕದಲ್ಲಿ ಇದ್ದಾರೆ. ಬೇಸರದಲ್ಲಿ ಇದ್ದಾರೆ. ಆದ್ದರಿಂದ ಹೇ ಅವಿನಾಶಿ ದೀಪಗಳೇ, ಈಗ ಆಶಾದೀಪಗಳ ದೀಪಾವಳಿಯನ್ನು ಆಚರಿಸಿ. ಮೊದಲು ಸ್ವಯಂ ನಂತರ ಸರ್ವರು, ಕೇಳಿದಿರಾ? ಬಾಕಿ ಬಾಪ್‌ದಾದಾರವರು ಮಕ್ಕಳ ಸ್ನೇಹವನ್ನು ನೋಡಿ ಖುಷಿ ಆಗಿದ್ದಾರೆ. ಸ್ನೇಹದ ಸಬ್ಜೆಕ್ಟ್‌ನಲ್ಲಿ ಪರ್ಸೆಂಟೇಜ್ ಬಹಳ ಚೆನ್ನಾಗಿದೆ. ತಾವು ಇಷ್ಟೊಂದು ಪರಿಶ್ರಮ ಪಟ್ಟು ಇಲ್ಲಿಗೆ ಏಕೆ ತಲುಪಿದ್ದೀರಿ, ತಮ್ಮನ್ನು ರೈಲು ಕರೆತಂದಿತೇ? ಅಥವಾ ವಿಮಾನ ಕರೆತಂದಿತೇ? ಅಲ್ಲ

ಸ್ನೇಹವು ಕರೆತಂದಿತು. ಸ್ನೇಹದ ವಿಮಾನದಲ್ಲಿ ಬಂದು ತಲುಪಿದ್ದೀರಿ. ಅಂದಾಗ ಸ್ನೇಹದಲ್ಲಂತೂ ಪಾಸ್ ಆಗಿದ್ದೀರಿ. ಈಗ ಆಲ್ಮೈಟಿ ಅಥಾರಿಟಿಯಲ್ಲಿ ಮಾಸ್ಟರ್ ಆಗಿದ್ದೇವೆ ಎನ್ನುವುದರಲ್ಲಿ ಪಾಸ್ ಆಗಿ. ಆಗ ಈ ಪ್ರಕೃತಿ, ಮಾಯೆ, ಸಂಸ್ಕಾರ ಎಲ್ಲವೂ ತಮಗೆ ದಾಸಿ ಆಗಿಬಿಡುತ್ತವೆ. ಪ್ರತೀ ಘಳಿಗೆಯು ತಮಗೋಸ್ಕರ ಕಾಯುತ್ತದೆ - ಮಾಲೀಕರೇ ತಮ್ಮ ಆಜ್ಞೆ ಏನು ಎಂದು. ಬ್ರಹ್ಮಾ ತಂದೆಯೂ ಸಹ ಮಾಲೀಕರಾಗಿ ಒಳಗಿಂದ ಒಳಗೆ ಇಂತಹ ಸೂಕ್ಷ್ಮ ಪುರುಷಾರ್ಥ ಮಾಡಿದರು. ಅದು ತಮಗೂ ತಿಳಿಯಿತು. ಹೇಗೆ ಸಂಪನ್ನರಾಗಿಬಿಟ್ಟರು! ಪಕ್ಷಿಯು ಹಾರಿಹೋಯಿತು. ಪಂಜರವು ತೆರೆಯಲ್ಪಟ್ಟಿತು. ಸಾಕಾರ ಪ್ರಪಂಚದ ಲೆಕ್ಕಾಚಾರ, ಸಾಕಾರ ಶರೀರದ ಪಂಜರವು ತೆರೆಯಲ್ಪಟ್ಟಿತು, ಪಕ್ಷಿಯು ಹಾರಿಹೋಯಿತು. ಈಗ ಬ್ರಹ್ಮಾ ತಂದೆಯೂ ಸಹ ಬಹಳ ಪ್ರೇಮದಿಂದ ಮಕ್ಕಳೇ! ಬೇಗ ಬನ್ನಿ, ಬೇಗ ಬನ್ನಿ ಈಗ ಬಂದುಬಿಡಿ. ಈಗಲೇ ಬನ್ನಿ ಎಂದು ಮಕ್ಕಳನ್ನು ಆಹ್ವಾನ ಮಾಡುತ್ತಿದ್ದಾರೆ. ಅಂದಾಗ ರೆಕ್ಕೆಗಳಂತೂ ಸಿಕ್ಕಿಬಿಟ್ಟಿದೆಯಲ್ಲವೇ! ಈಗ ಒಂದು ಸೆಕೆಂಡಿನಲ್ಲಿ ತಮ್ಮ ಮನಸ್ಸಿನಲ್ಲಿ ಈ ವ್ಯಾಯಾಮ (ಡ್ರಿಲ್) ಮಾಡಿರಿ. ಈಗೀಗ ಮಾಡಿ. ಎಲ್ಲಾ ಸಂಕಲ್ಪಗಳನ್ನು ಸಮಾಪ್ತಿ ಮಾಡಿ. ಇದೇ ಡ್ರಿಲ್ ಮಾಡಿ - ಓ ಬಾಬಾ, ಮಧುರ ಬಾಬಾ, ಪ್ರಿಯಬಾಬಾ ನಾವು ತಮ್ಮ ಸಮಾನ ಅವ್ಯಕ್ತರೂಪಧಾರಿಯಾದೆವು, ಆದೆವು. (ಡ್ರಿಲ್ ಮಾಡಿಸಿದರು)

**ಒಳ್ಳೆಯದು - ನಾಲ್ಕಾರೂ ಕಡೆಯ ಸ್ನೇಹಿ ಸೋ ಸಮರ್ಥ ಮಕ್ಕಳಿಗೆ, ನಾಲ್ಕಾರೂ ಕಡೆಯ ಸ್ವರಾಜ್ಯಾಧಿಕಾರಿ ಸೋ ವಿಶ್ವರಾಜ್ಯಾಧಿಕಾರಿ ಮಕ್ಕಳಿಗೆ, ಎಲ್ಲಾ ಕಡೆಯ ಮಾಸ್ಟರ್ ಆಲ್ಮೈಟಿ ಅಥಾರಿಟಿಯ ಆಸನದ ಮೇಲೆ ಸ್ಥಿತರಾಗಿರುವಂತಹ ತೀವ್ರ ಪುರುಷಾರ್ಥಿ ಮಕ್ಕಳಿಗೆ, ಸದಾ ಮಾಲೀಕರಾಗಿ ಪ್ರಕೃತಿಗೆ, ಸಂಸ್ಕಾರಕ್ಕೆ, ಶಕ್ತಿಗಳಿಗೆ, ಗುಣಗಳಿಗೆ ಆರ್ಡರ್ ಮಾಡುವಂತಹ ವಿಶ್ವರಾಜ್ಯಾಧಿಕಾರಿ ಮಕ್ಕಳಿಗೆ, ತಂದೆಯ ಸಮಾನ ಸಂಪೂರ್ಣತೆ -ಸಂಪನ್ನತೆಯನ್ನು ಸಮೀಪ ತರುವಂತಹ ದೇಶ-ವಿದೇಶದ ಪ್ರತಿಯೊಂದು ಸ್ಥಾನದ ಮೂಲೆ-ಮೂಲೆಯಲ್ಲಿ ಇರುವ ಮಕ್ಕಳಿಗೆ ಸಮರ್ಥದಿವಸದ, ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

ಈಗೀಗ ಬಾಪ್‌ದಾದಾರವರಿಗೆ ಯಾರ ನೆನಪು ಬರುತ್ತಿದೆ? ಜನಕ ಮಗ: (ಜಾನಕಿ ದಾದಿ) ವಿಶೇಷವಾಗಿ ಸಂದೇಶವನ್ನು ಕಳುಹಿಸಿದರು - ಬಾಬಾ ನಾನು ಸಭೆಯಲ್ಲಿ ಅವಶ್ಯವಾಗಿ ಹಾಜರಿರುತ್ತೇನೆ ಅಂದಾಗ ಲಂಡನ್ನಲ್ಲಿ ಇರಬಹುದು, ಭಲೆ ಅಮೇರಿಕಾ, ಆಸ್ಟ್ರೇಲಿಯಾ, ಆಫ್ರಿಕಾ, ಏಶಿಯಾ ಮತ್ತು ಸರ್ವ ಭಾರತದ ಪ್ರತಿ ದೇಶದ ಮಕ್ಕಳಿಗೆ ಒಬ್ಬೊಬ್ಬರಿಗೂ ಸಹ ಹೆಸರು ಮತ್ತು ವಿಶೇಷತೆಯ ಸಹಿತ ನೆನಪು-ಪ್ರೀತಿ, ತಮಗಂತೂ ಸಮ್ಮುಖದಲ್ಲಿ ನೆನಪು-ಪ್ರೀತಿ ಸಿಗುತ್ತಿದೆಯಲ್ಲವೇ! ಒಳ್ಳೆಯದು. ಇಂದು ಮಧುಬನದವರನ್ನು ನೆನಪು ಮಾಡಿದೆವು. ಇವರು ಮುಂದೆ- ಮುಂದೆ ಕುಳಿತುಕೊಳ್ಳುತ್ತಾರಲ್ಲವೇ. ಮಧುಬನದವರು ಕೈಯನ್ನು ಎತ್ತಿರಿ. ಎಲ್ಲರೂ ಮಧುಬನದ ಭುಜಗಳಾಗಿದ್ದೀರಿ. ಮಧುಬನದವರಿಗೆ ವಿಶೇಷವಾಗಿ ತ್ಯಾಗದ ಭಾಗ್ಯವು ಸೂಕ್ಷ್ಮದಲ್ಲಂತೂ ಪ್ರಾಪ್ತಿ ಆಗುತ್ತದೆ ಏಕೆಂದರೆ ಪಾಂಡವಭವನದಲ್ಲಿ, ಮಧುಬನದಲ್ಲಿ, ಶಾಂತಿವನದಲ್ಲಿ ಇರಬಹುದು ಆದರೆ ಮಿಲನ ಮಾಡುವವರಿಗೆ ಅವಕಾಶವು ಸಿಗುತ್ತದೆ. ಮಧುಬನದವರು ಸಾಕ್ಷಿಯಾಗಿ ನೋಡುತ್ತಿರುತ್ತಾರೆ, ಆದರೆ ಹೃದಯದಲ್ಲಿ ಸದಾ ಮಧುಬನದವರ ನೆನಪು ಇದೆಯೇ? ಮಧುಬನದಿಂದ ವ್ಯರ್ಥದ ನಾಮರೂಪಗಳು ಸಹ ಸಮಾಪ್ತಿ ಆಗಲಿ, ಸೇವೆಯಲ್ಲೂ, ಸ್ಥಿತಿಯಲ್ಲೂ ಎಲ್ಲದರಲ್ಲೂ ಮಹಾನ್, ಸರಿಯಲ್ಲವೇ. ಮಧುಬನದವರನ್ನು ಎಂದೂ ಮರೆಯುವುದಿಲ್ಲ. ಮಧುಬನದವರಿಗೆ ತ್ಯಾಗದ ಅವಕಾಶವನ್ನು ಕೊಡುತ್ತೇವೆ. ಒಳ್ಳೆಯದು.

ರಿವೈಸ್ ಕೋರ್ಸ್ 18-01-2004.

***ವಿಶ್ವದ ಅಥಾರಿಟಿಯ ಡೈರೆಕ್ಟ್ ಮಕ್ಕಳಾಗಿದ್ದೇವೆ ಎಂಬ ಸ್ಮೃತಿಯನ್ನು ಪ್ರತ್ಯಕ್ಷ ರೂಪದಲ್ಲಿ ಇಟ್ಟುಕೊಂಡು ಸರ್ವಶಕ್ತಿಗಳನ್ನು ಆಜ್ಞೆಯ ಪ್ರಮಾಣ ನಡೆಸಿ.***

ಇಡೀ ದಿನದಲ್ಲಿ ಸಮಯ, ಸಂಕಲ್ಪ, ಎಷ್ಟು ವ್ಯರ್ಥವಾಗಿವೆ, ಎಷ್ಟು ಸಮರ್ಥವಾಗಿವೆ ಎಂಬ ಪರ್ಸೆಂಟೇಜನ್ನು ಪರಿಶೀಲನೆ ಮಾಡಿಕೊಳ್ಳಿ. ಪ್ರತಿಯೊಂದು ದಿನ ಪರಿಶೀಲನೆ ಮಾಡಿಕೊಳ್ಳಬೇಕು ಏಕೆಂದರೆ ಬಹಳ ಸಮಯದ ಪುರುಷಾರ್ಥ ಬಹಳ ಕಾಲದ ರಾಜ್ಯದ ಭಾಗ್ಯವನ್ನು ಕೊಡುತ್ತದೆ. ನೀವು ಒಂದು ವೇಳೆ ಅಂತಿಮ ಸಮಯದಲ್ಲಿ ಬೇಹದ್ ವೈರಾಗ್ಯ ಬಂದುಬಿಡುತ್ತದೆ ಎಂದು ಯೋಚಿಸಿದರೆ ಆಗ ಅದು ಬಹಳ ಸಮಯದ ಪುರುಷಾರ್ಥವಾಗುತ್ತದೆಯೇ ಅಥವಾ ಸ್ವಲ್ಪ ಸಮಯದ ಪುರುಷಾರ್ಥವಾಗುತ್ತದೆಯೇ? ಈಗಿನ  ಬಹಳ ಸಮಯದ ಪುರುಷಾರ್ಥಕ್ಕೆ ಅಲ್ಲಿನ ಬಹಳ ಸಮಯದ ಪ್ರಾಲಬ್ಧಕ್ಕೆ ಸಂಬಂಧವಿದೆ. ಆದ್ದರಿಂದ ಈಗ ಇನ್ನೂ ವಿನಾಶದ ದಿನಾಂಕವು ನಿರ್ಣಯವಾಗುತ್ತಿಲ್ಲ. ಯಾವಾಗ ಆಗುತ್ತದೆಯೋ ತಿಳಿಯುವುದಿಲ್ಲ ಎಂದು ಸೋಮಾರಿಯಾಗಬಾರದು. ವಿಶ್ವದ ಅಂತಿಮ ಸಮಯದ ಬಗ್ಗೆ ಯೋಚಿಸುವ ಮೊದಲು ನಿಮ್ಮ ಜನ್ಮದ ಅಂತಿಮ ಸಮಯದ ಬಗ್ಗೆ ಯೋಚಿಸಿರಿ. "ಪ್ರತಿ ಘಳಿಗೆಯೂ ಅಂತಿಮ ಘಳಿಗೆಯಾಗಿದೆ" ಎಂದು ಭಾವಿಸಿರಿ. ಎನ್ನುತ್ತಾ ಬಾಪ್‌ದಾದಾ ತನ್ನ ಮಕ್ಕಳೊಂದಿಗೆ ಮಾತನಾಡುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ದಿವ್ಯಜನ್ಮ ಪಡೆಯುತ್ತಿದ್ದಂತೆಯೇ ಬಾಪ್‌ದಾದಾರವರಿಂದ ಸರ್ವಶಕ್ತಿವಾನ್ ಭವ! ಎಂಬ ವರದಾನದ ವರದಾನಿಯಾಗಿದ್ದೇನೆ.

2. ನಾನು ಯಜಮಾನಿಯಾಗಿ (ಮಾಲಿಕ) ಮಾಸ್ಟರ್ ಸರ್ವಶಕ್ತಿವಾನ್ ಸ್ಥಿತಿಯ ಆಸನದ ಮೇಲೆ ಸ್ಥಿತವಾಗಿ ಸಮಯಾನುಸಾರ ಯಾವ ಶಕ್ತಿಗೆ ಆರ್ಡರ್ ಮಾಡಿದರೂ ಅದು ಹಾಜರಾಗುತ್ತಿದೆ.

3. ನಾನು ವಿಶ್ವಕ್ಕೆ ಅಧಿಕಾರಿಯಾದ ತಂದೆಯ ಡೈರೆಕ್ಟ್ ಮಗುವಾಗಿದ್ದೇನೆ.

4. ನಾನು ಸರ್ವಾತ್ಮರಿಗೆ ಶಕ್ತಿ,  ಸಮರ್ಥತೆಯನ್ನು ಕೊಡುವ ಸಮರ್ಥ ಆತ್ಮ.

5. ನಾನು ದಿನವಿಡೀ ಸಮಯ,  ಸಂಕಲ್ಪ, ಎಷ್ಟು ವೇಸ್ಟ್ (ವ್ಯರ್ಥ) ಎಷ್ಟು ಬೆಸ್ಟ್ (ಸಮರ್ಥ)ವಾಗಿವೆ ಎಂಬ ಪ್ರತಿಶತವನ್ನು ಪರಿಶೀಲನೆ ಮಾಡಿಕೊಂಡು ವೇಸ್ಟ್ ಅನ್ನು ಬೆಸ್ಟಿಗೆ ಪರಿವರ್ತನೆ ಮಾಡಿಕೊಂಡಿರುವ ನಂಬರ್ ಒನ್ ವಿದ್ಯಾರ್ಥಿ.

6. ನಾನು ಬ್ರಹ್ಮಾತಂದೆಯ ಸಮಾನವಾಗಿ ಪ್ರತಿದಿನ ಸ್ವರಾಜ್ಯದ (ಕರ್ಮೇಂದ್ರಿಯಗಳ) ದರ್ಬಾರನಿಟ್ಟುಕೊಳ್ಳುವ ಸ್ವರಾಜ್ಯಾಧಿಕಾರಿ ರಾಜನು.

7. ನಾನು ಸ್ವರಾಜ್ಯಾಧಿಕಾರಿ.

8. ನಾನು ವರ್ತಮಾನದಲ್ಲಿ ಸಂಕಲ್ಪ ಮತ್ತು ಸಮಯ ಸಹಿತವಾಗಿ ಕರ್ಮೇಂದ್ರಿಯಗಳನ್ನು (ಸ್ವರಾಜ್ಯ) ಕಂಟ್ರೋಲ್ ಮಾಡಿ ಭವಿಷ್ಯದ ವಿಶ್ವ ರಾಜ್ಯವನ್ನು ಕಂಟ್ರೋಲ್ ಮಾಡುವ ರಾಜನಾಗಿದ್ದೇನೆ.

9. ನಾನು ಬಹಳ ಸಮಯದ ಪುರುಷಾರ್ಥದ ಮೂಲಕ 21 ಜನ್ಮಗಳ ಪೂರ್ಣ ರಾಜ್ಯಾಧಿಕಾರಿಯಾಗಿದ್ದೇನೆ.

10. ನಾನು ಮೊದಲು ನನ್ನ ಅಂತಿಮ ಸಮಯದ ಬಗ್ಗೆ ಯೋಚಿಸುತ್ತಿದ್ದೇನೆ, ವಿಶ್ವದ ಅಂತಿಮ ಸಮಯದ ಬಗ್ಗೆ ಅಲ್ಲ.

11. ನನ್ನ ಪ್ರತಿ ಘಳಿಗೆ ಅಂತಿಮಘಳಿಗೆ ಎಂಬ ಜಗದಂಬಾ ಸರಸ್ವತಿಯ ಸ್ಲೋಗನ್ ಸದಾ ಸ್ಮೃತಿಯಲ್ಲಿ ಇಟ್ಟುಕೊಂಡಿದ್ದೇನೆ.

12. ನಾನು ಸರ್ವಶಕ್ತಿವಾನ್ ಸೀಟ್ನ ಮೇಲೆ ಸ್ಥಿತವಾಗಿರುವ ಕಾರಣ ಕರ್ಮೇಂದ್ರಿಯಗಳು, ಶಕ್ತಿಗಳು, ಗುಣಗಳು ಎಲ್ಲವೂ ನನಗೆ ಚಿತ್ತ ಪ್ರಭು! ಎನ್ನುತ್ತಾ ಹಾಜರಾಗಿವೆ.

13. ನಾನು ಪ್ರತಿಯೊಂದು ಸಂಕಲ್ಪ ಮತ್ತು ಸಮಯದ ಸಫಲತಾ ಮೂರ್ತಿಯಾಗಿ ವಿಶ್ವದಲ್ಲಿ ಆಶಾ ದೀಪವನ್ನು ಬೆಳಗಿಸುವ ಅವಿನಾಶಿ ದೀಪವಾಗಿದ್ದೇನೆ.

14. ನಾನು ಮಾಲೀಕನಾಗಿ ಪ್ರಕೃತಿ, ಮಾಯೆ, ಸಂಸ್ಕಾರಗಳನ್ನು ದಾಸಿಯನ್ನಾಗಿ ಮಾಡಿಕೊಳ್ಳುವ ಮಾಸ್ಟರ್ ಸರ್ವಶಕ್ತಿವಂತನು.

15. ಓ ಬಾಬಾ, ಮಧುರವಾದ ಬಾಬಾ, ಪ್ರಿಯವಾದ ಬಾಬಾ, ನಾವು ನಿನ್ನ ಸಮಾನವಾದ ಅವ್ಯಕ್ತ ರೂಪಧಾರಿಯಾಗಿ ಬಿಟ್ಟಿದ್ದೇವೆ, ಎಂಬ ಡ್ರಿಲ್ಲನ್ನು ಸದಾ ಮಾಡುತ್ತಿದ್ದೇನೆ.